**<u>ಫ್ರೀ ಬಿಡ್ ಸಭೆಯ ನಡಾವಳಿ</u>**

ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯ ಎಲ್ಲಾ ವಿಭಾಗಗಳ, ಎಲ್ಲಾ ಪ್ರಾಂತೀಯ ಕಛೇರಿಗಳ ಮತ್ತು ನ್ಯಾಯಾಲಯದ ಎಲ್ಲಾ ಅಗತ್ಯ ಅತ್ಯಮೂಲ್ಯ ದಾಖಲಾತಿಗಳನ್ನು ಸ್ಕ್ಯಾನ್ ಮಾಡಿಸಿ ಸಂರಕ್ಷಿಸುವ ಕುರಿತಂತೆ ದಿನಾಂಕ:23.04.2026ರಂದು ವಿಜಯವಾಣಿ ದಿನ ಪ್ರತಿಕೆಯಲ್ಲಿ ಟೆಂಡರ್ ಅಧಿಸೂಚನೆಯನ್ನು ಕರೆದಿದ್ದು, ಟೆಂಡರ್ ಸಲ್ಲಿಸಲು ಪ್ರಾರಂಭಿಕ ದಿನಾಂಕ: 23.04.2026 ಆಗಿದ್ದು, ಫ್ರೀ ಬಿಡ್ ಸಭೆಯ ದಿನಾಂಕ:08.05.2026 ಆಗಿರುತ್ತದೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 15.05.2026 ಆಗಿರುತ್ತದೆ. ಅದರಂತೆ ಫ್ರೀ ಬಿಡ್ ಸಭೆಯ ದಿನಾಂಕ:08.05.2026ರಂದು ಜರುಗಿದ್ದು, ಅದರ ನಡಾವಳಿ ಈ ಕೆಳಕಂಡಂತಿರುತ್ತದೆ.

**ಸಭೆಯಲ್ಲಿ ಚರ್ಚೆಯಾದ ವಿಷಯಗಳು** & **ನಿರ್ಣಯಗಳು**:

- ಟೆಂಡರ್ ಫೀ 2000/- + ಜಿಎಸ್‌ಟಿ ಸೇರಿ ಒಟ್ಟು ರೂ.2360/- ಅನ್ನು ಪಾವತಿಸತಕ್ಕದ್ದು.

- ಸಂಯುಕ್ತ ಸಹಕಾರಿಯ ಕಛೇರಿ ವಾರದಲ್ಲಿ 06ದಿನಗಳು ಕಾರ್ಯನಿರ್ವಹಿಸುತ್ತಿರುತ್ತದೆ (2ನೇ ಶನಿವಾರ ಹೊರತುಪಡಿಸಿ) ಹಾಗೂ ಸಮಯವು ಬೆಳಗ್ಗೆ 10:00 ಗಂಟೆಯಿಂದ ಸಂಜೆ 5:30 ಆಗಿದ್ದು, ಇದನ್ನು ಹೊರತುಪಡಿಸಿ ಉಳಿದ ಸಮಯದಲ್ಲಿ ಸ್ಕ್ಯಾನ್ ಮಾಡಬೇಕಾದಲ್ಲಿ ಟೆಂಡರ್‌ನಲ್ಲಿ ಆಯ್ಕೆಯಾದ ಸಂಸ್ಥೆಯು ಮುಂಚಿತವಾಗಿ ತಿಳಿಸುವುದು.

- ಮೂಲ ದಾಖಲಾತಿಯ ಪ್ರಕಾರದಲ್ಲಿಯೇ ಸ್ಕ್ಯಾನ್ ಪೇಪರ್ ಹಾಗೂ PDF Format ಇರತಕ್ಕದ್ದು. ಎಲ್ಲಾ ದಾಖಲಾತಿಗಳಿಗೂ ಪುಟ ಸಂಖ್ಯೆ ಇರತಕ್ಕದ್ದು. ಎಲ್ಲಾ ಕಡತಗಳು ಹುಡುಕುವ ರೀತಿ (search) ಇರತಕ್ಕದ್ದು.

- ಸ್ಕ್ಯಾನ್ ಮೆಷನ್‌ಗೆ ಹಾಗೂ ಇನ್ನಿತರೆ ಉಪಕರಣಗಳಿಗೆ ವಿಧ್ಯುತ್ ಸಂಪರ್ಕವನ್ನು ಟೆಂಡರ್‌ನಲ್ಲಿ ಆಯ್ಕೆಯಾದ ಸಂಸ್ಥೆಯೇ ಆಯ್ಕೆ ಮಾಡಿಕೊಳ್ಳತಕ್ಕದ್ದು. ಅದಾಗ್ಯೂ ಅಗತ್ಯವಿದ್ದಲ್ಲಿ ಕಛೇರಿಯಲ್ಲಿ ಲಭ್ಯವಿರುವ ವಿಧ್ಯುತ್ ಸಂಪರ್ಕವನ್ನು ಒದಗಿಸಲಾಗುವುದು.

- ಸೆಕ್ಷನ್03.1ರಲ್ಲಿ ತಿಳಿಸಿರುವ ಕ್ರಮ ಸಂಖ್ಯೆ 5 ಮತ್ತು 6 ಅನ್ನು ರದ್ದುಗೊಳಿಸಿದ್ದು, ಸಲ್ಲಿಸುವ ಅಗತ್ಯವಿರುವುದಿಲ್ಲ.